**Akashvani : Bangalore**
**National Bulletin In Kannada**
**23.03.2024 / 7.35AM**
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**23.03.2024 / 7.35AM**

******

**ಮುಖ್ಯಾಂಶಗಳು:**

1. ಭಾರತ - ಭೂತಾನ್ ಸಹಕಾರ ಸಮನ್ವಯ ಮುಂದುವರಿಕೆ; ಜಲವಿದ್ಯುತ್, ಸೌರಶಕ್ತಿ, ಹಸಿರು ಹೈಡ್ರೋಜನ್ ವಲಯಗಳ ಜಂಟಿ ಅಭಿವೃದ್ಧಿಗೆ ಸಮ್ಮತಿ
2. ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯ ಕಸ್ಟಡಿಗೆ ಒಪ್ಪಿಸಿ ದೆಹಲಿ ನ್ಯಾಯಾಲಯ ಆದೇಶ
3. ರಷ್ಯಾದ ರಾಜಧಾನಿ ಮಾಸ್ಕೋ ಬಳಿ ಗುಂಡಿನ ದಾಳಿ; ೪೦ ಮಂದಿಯ ಸಾವು, ನೂರಕ್ಕೂ ಹೆಚ್ಚು ಜನ ಗಾಯ
4. ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಮೇಲುಗೈ ಸಾಧಿಸಿ, ಫೈನಲ್ ತಲುಪಿದ ಕಿಡಂಬಿ ಶ್ರೀಕಾಂತ್

******

ರಾಷ್ಟ್ರ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳಲ್ಲಿ ಪರಸ್ಪರ ಸಮನ್ವಯತೆ ಮತ್ತು ಸಹಕಾರವನ್ನು ಮುಂದುವರಿಸುವುದಾಗಿ ಭಾರತ ಹಾಗೂ ಭೂತಾನ್ ಒಪ್ಪಿಕೊಂಡಿದೆ. ಜಲವಿದ್ಯುತ್, ಸೌರಶಕ್ತಿ ಮತ್ತು ಹಸಿರು ಹೈಡ್ರೋಜನ್ ವಲಯಗಳಲ್ಲಿ ಜಂಟಿಯಾಗಿ ಹೊಸ ಯೋಜನೆಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಭೂತಾನ್ ಭೇಟಿಯ ಕುರಿತಾದ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ. ಭಾರತ - ಭೂತಾನ್ ಇಂಧನ ಪಾಲುದಾರಿಕೆಯ ಜಂಟಿ ಹೇಳಿಕೆಯನ್ನು ಸ್ವಾಗತಿಸಲಾಗಿದೆ. ಉಭಯ ದೇಶಗಳ ಗಡಿಗಳುದ್ದಕ್ಕೂ ರೈಲು ಮಾರ್ಗ, ರಸ್ತೆ ಸಂಪರ್ಕ, ವಾಯು ಮತ್ತು ಜಲ ಮಾರ್ಗಗಳು, ಸರಕು ಮತ್ತು ಸೇವೆಗಳ ತಡೆರಹಿತ ವಹಿವಾಟಿಗೆ ಈ ಹೇಳಿಕೆ ಇಂಬು ನೀಡಿದೆ. ಜತೆಗೆ ಆರ್ಥಿಕ ಮತ್ತು ಡಿಜಿಟಲ್ ಸಂಪರ್ಕ ಉತ್ತೇಜನದ ಮೇಲೂ ಬೆಳಕು ಚೆಲ್ಲಲಾಗಿದೆ. ಉಭಯ ರಾಷ್ಟ್ರಗಳ ಮಧ್ಯೆ ನಿರಂತರ

ಪಾಲುದಾರಿಕೆಯು, ಸಾಮಾನ್ಯ ಮೌಲ್ಯಗಳು, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪರಂಪರೆಯ ಹಿನ್ನೆಲೆಯಲ್ಲಿ ಹಂಚಿಕೆಯ ರೂಪದಲ್ಲಿ ನೆಲೆಗೊಂಡಿದೆ. ಇದೇ ವೇಳೆ ಭೂತಾನ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿ ಆರ್ಡರ್ ಆಫ್ ದಿ ಡ್ರುಕ್ ಗಯಾಲ್ಪೋಅನ್ನು ಭೂತಾನ್ ದೊರೆ ಜಿಗ್ಮೆ ಖೇಸರ್ ನಾಮ್ಗೈಲ್ ವಾಂಗ್‌ಚುಕ್ ಥಿಂಪುವಿನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಪ್ರದಾನ ಮಾಡಿದರು.

******

ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ದೆಹಲಿ ಮುಖ್ಯಮಂತ್ರಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಈ ತಿಂಗಳ ೨೮ ರವರೆಗೆ ಜಾರಿ ನಿರ್ದೇಶನಾಲಯದ ಕಸ್ಟಡಿಗೆ ಒಪ್ಪಿಸಿ, ದೆಹಲಿಯ ರೋಸ್ ಅವೆನ್ಯೂ ಕೋರ್ಟ್ ಆದೇಶ ನೀಡಿದೆ. ಹತ್ತು ದಿನಗಳ ಕಾಲ ತಮ್ಮ ವಶಕ್ಕೆ ನೀಡಬೇಕು ಎಂದು ಜಾರಿ ನಿರ್ದೇಶನಾಲಯ ಮನವಿ ಮಾಡಿತ್ತು. ಈ ಮಧ್ಯೆ, ಬಿಜೆಪಿ ಹಿರಿಯ ನಾಯಕಿ ಸ್ಮೃತಿ ಇರಾನಿ, ಕೇಜ್ರಿವಾಲ್, ಆಡಳಿತಾತ್ಮಕ ಅಧಿಕಾರವನ್ನು ಭ್ರಷ್ಟಾಚಾರಕ್ಕಾಗಿ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಮಧ್ಯೆ, ಕೇಜ್ರಿವಾಲ್ ದೆಹಲಿ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ದೆಹಲಿಯ ಸಚಿವೆ ಮತ್ತು ಆಪ್ ನಾಯಕಿ ಆತಿಶಿ ಹೇಳಿದ್ದಾರೆ. ಅವರು ರಾಜೀನಾಮೆ ನೀಡಲು ಯಾವುದೇ ಸಾಂವಿಧಾನಿಕ ನಿಬಂಧನೆಯ ಅಗತ್ಯವಿಲ್ಲ ಎಂದು ಹೇಳಿದರು. ಸಂಪೂರ್ಣ ದೆಹಲಿ ಕ್ಯಾಬಿನೆಟ್ ಅಖಂಡವಾಗಿದ್ದು, ಪ್ರತಿಯೊಂದು ಇಲಾಖೆಯೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಅವರು ಸ್ಪಷ್ಟಪಡಿಸಿದರು.

******

ಲೋಕಸಭೆ ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷಕ್ಕೆ ಭಾರೀ ಹಿನ್ನಡೆಯಾಗಿದೆ. ಮಹಾರಾಷ್ಟ್ರದ ಮಾಜಿ ಕಾಂಗ್ರೆಸ್ ನಾಯಕ ನಿತಿನ್ ಕೊಡ್ವಟೆ ಮತ್ತು ಅವರ ಪತ್ನಿ ಚಂದಾ ಕೊಡ್ವಟೆ ನಿನ್ನೆ ಭಾರತೀಯ ಜನತಾ ಪಕ್ಷಕ್ಕೆ (ಬಿಜೆಪಿ) ಸೇರ್ಪಡೆಗೊಂಡಿದ್ದಾರೆ. ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ ಚಂದ್ರಶೇಖರ ಬಾವನಕುಲೆ ಅವರನ್ನು ಸ್ವಾಗತಿಸಿದರು.

******

ಪಶ್ಚಮಬಂಗಾಳದ ನಾಲ್ಕು ಜಿಲ್ಲೆಗಳಿಗೆ ಚುನಾವಣಾ ಆಯೋಗ ಹೊಸ ಜಿಲ್ಲಾಧಿಕಾರಿಗಳನ್ನು ನೇಮಿಸಿದೆ, ಕುರ್ಬಾ ಮೇಗಿನಿಪುರ್, ಝುರ್‌ಗ್ರಾಮ್, ಪುರ್ಬಾ ವರ್ಧಮಾನ್ ಮತ್ತು ಭೀರ್‌ಬೂಮ್ ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ವರ್ಗಾವಣೆ ಮಾಡಿ, ಚುನಾವಣಾ ಆಯೋಗ ನಿನ್ನೆ ಆದೇಶ ಹೊರಡಿಸಿತು. ಈ ನಾಲ್ಕು ಜಿಲ್ಲೆಗಳಲ್ಲಿ ನೂತನ ಜಿಲ್ಲಾಧಿಕಾರಿಗಳ ನೇಮಕ ಮಾಡಲಾಗಿದೆ.

******

ಮಧ್ಯಪ್ರದೇಶದಲ್ಲಿ ಎಲ್ಲ ೨೯ ಲೋಕಸಭಾ ಕ್ಷೇತ್ರಗಳಿಗೆ ಚುನಾವಣೆ ನಾಲ್ಕು ಹಂತಗಳಲ್ಲಿ ನಡೆಯಲಿದೆ. ರಾಜ್ಯಾದ್ಯಂತ ಚುನಾವಣಾ ಪ್ರಚಾರ ಬಿರುಸುಗೊಂಡಿದ್ದು, ಕಾನೂನು ಪಾಲನೆ ಕಾರ್ಯ ಕೂಡ ಕಟ್ಟುನಿಟ್ಟಾಗಿ ಸಾಗಿದೆ. ಇಲ್ಲಿಯವರೆಗೆ ಪೊಲೀಸರು ಮತ್ತು ಇತರ ಜಾರಿ ಸಂಸ್ಥೆಗಳು ರಾಜ್ಯದಲ್ಲಿ ೧೪ ಕೋಟಿ ೨೨ ಲಕ್ಷ ರೂಪಾಯಿ ಮೌಲ್ಯದ ವಸ್ತುಗಳನ್ನು ವಶಕ್ಕೆ ತೆಗೆದುಕೊಂಡಿವೆ. ಇವು ಲೋಕಸಭಾ ಚುನಾವಣೆ ಪ್ರಚಾರದ ಹಿನ್ನೆಲೆಯಲ್ಲಿ ದಾಸ್ತಾನು ಮಾಡಲಾಗಿತ್ತು ಎಂದು ಹೇಳಲಾಗಿದೆ.  ಮಧ್ಯಪ್ರದೇಶದಲ್ಲಿ ಒಟ್ಟು ೩ ಸಾವಿರದ ೫೦೦ ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ವಿಶೇಷ ಮಹಿಳಾ ಮತಗಟ್ಟೆ ಸಿಬ್ಬಂದಿಯನ್ನು ನೇಮಿಸಲಾಗಿದೆ, ಸಂಪೂರ್ಣ ೩ ಸಾವಿರದ ೫೦೦ ಮತ ಕೇಂದ್ರಗಳನ್ನು ಮಹಿಳಾ ಸಂಚಾಲಿತ ಸಿಬ್ಬಂದಿಯೇ ನಿರ್ವಹಿಸಲಿದೆ ಎಂದು ಮುಖ್ಯ ಚುನಾವಣಾಧಿಕಾರಿ ಅನುಪಮ್ ರಂಜನ್ ಮಾಹಿತಿ ನೀಡಿರುವುದಾಗಿ ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

******

ಇಂದು ವೀರ ಸ್ವತಂತ್ರ್ಯ ಹೋರಾಟಗಾರರಾದ ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ಅವರ ಹುತಾತ್ಮ ದಿನ. ಈ ದಿನವನ್ನು ಶಹೀದ್ ಎ ಆಸಮ್ ಎಂದು ಆಚರಿಸಲಾಗುತ್ತದೆ.  ೨೩ ಮಾರ್ಚ್ ೧೯೩೧ರಲ್ಲಿ ಲಾಹೋರ್‌ನಲ್ಲಿ ಪಿತೂರಿ ಪ್ರಕರಣದ ಹಿನ್ನೆಲೆಯಲ್ಲಿ ಈ ಮೂವರನ್ನು ಗಲ್ಲಿಗೇರಿಸಲಾಗಿತ್ತು. ಪಂಜಾಬ್ ಸೇರಿದಂತೆ ದೇಶದಾದ್ಯಂತ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗುತ್ತಿದೆ. ಭಗತ್ ಸಿಂಗ್ ಅವರ ಸ್ವಂತ ಊರಾದ ಪಂಜಾಬ್‌ನ ಖಟ್ಕರ್ ಕಾಲನ್‌ನಲ್ಲಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಹುಸೇನಿವಾಲಾದಲ್ಲಿ ರಾಷ್ಟ್ರೀಯ ಹುತಾತ್ಮರ

ಸ್ಮಾರಕದ ಸ್ಥಳದಲ್ಲೂ ಕೂಡ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

******

೨೦೦೮ರ ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಬಿಜೆಪಿ ಸಂಸದೆ ಪ್ರಜ್ಞಾ ಸಿಂಗ್ ಠಾಕೂರ್ ವಿರುದ್ಧ ಹೊರಡಿಸಿದ್ದ ಜಾಮೀನು ನೀಡಬಹುದಾದ ವಾರಂಟ್ ಅನ್ನು ವಿಶೇಷ ನ್ಯಾಯಾಲಯ ಮುಂಬೈಯಲ್ಲಿ ರದ್ದುಗೊಳಿಸಿದೆ. ಮಾರ್ಚ್ ೨೦ರಂದು ಖಾಸಗಿ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ನ್ಯಾಯಾಲಯದ ಮುಂದೆ ಪ್ರಜ್ಞಾ ಸಿಂಗ್ ಠಾಕೂರ್ ಹಾಜರಾಗಿದ್ದರು. ನಂತರ ವಾರೆಂಟ್ ಅನ್ನು ರದ್ದುಗೊಳಿಸಲಾಯಿತು. ನ್ಯಾಯಾಲಯವು ಪ್ರಜ್ಞಾ ಸಿಂಗ್ ಠಾಕೂರ್ ವಿರುದ್ಧ ಮಾರ್ಚ್ ೧೧ ರಂದು ಜಾಮೀನು ನೀಡಬಹುದಾದ ವಾರಂಟ್ ಹೊರಡಿಸಿತ್ತು. ಅವರ ಹೇಳಿಕೆ ದಾಖಲಿಸಲು ದಿನಾಂಕ ನಿಗದಿಯಾಗಿದೆ.

******

ಇದೇ ತಿಂಗಳ ೩೧ರ ಭಾನುವಾರದಂದು ಎಲ್ಲ ಬ್ಯಾಂಕ್‌ಗಳ ಶಾಖೆಗಳು ಕಾರ್ಯನಿರ್ವಹಿಸುವಂತೆ ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದೆ. ಪ್ರಸಕ್ತ ಹಣಕಾಸು ವರ್ಷದ ಕೊನೆಯ ದಿನ ಸರ್ಕಾರದ ಸ್ವೀಕೃತಿ ಮತ್ತು ಪಾವತಿಗಳಿಗೆ ಅನುಕೂಲವಾಗುವಂತೆ ವಹಿವಾಟುಗಳನ್ನು ನಡೆಸಲು ಬ್ಯಾಂಕ್‌ಗಳು ಕರ್ತವ್ಯ ನಿರ್ವಹಿಸಬೇಕೆಂಬ ಸರ್ಕಾರದ ಮನವಿ ಮೇರೆಗೆ ಆರ್‌ಬಿಐ ಈ ಸೂಚನೆ ನೀಡಿದೆ. ಭಾನುವಾರದಂದು ಸಹ ಬ್ಯಾಂಕ್ ಸೇವೆಗಳು ಲಭ್ಯವಿರುವ ಬಗ್ಗೆ ಜನರಿಗೆ ಮಾಹಿತಿ ನೀಡಲು ವ್ಯಾಪಕ ಪ್ರಚಾರ ಕಾರ್ಯ ಕೈಗೊಳ್ಳುವಂತೆ ಆರ್‌ಬಿಐ ಎಲ್ಲ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಿದೆ.

******

ರಷ್ಯಾ ರಾಜಧಾನಿ ಮಾಸ್ಕೋ ಬಳಿ ಜನಪ್ರಿಯ ಸಂಗೀತ ಕಚೇರಿಯ ಸಂಕೀರ್ಣವೊಂದರಲ್ಲಿ ಶಸ್ತ್ರಸಜ್ಜಿತ ದಾಳಿಕೋರರು ಗುಂಡಿನ ದಾಳಿ ನಡೆಸಿದ ಪರಿಣಾಮ ಕನಿಷ್ಠ ೪೦ ಮಂದಿ ಸಾವನ್ನಪ್ಪಿದ್ದಾರೆ ಮತ್ತು ೧೦೦ ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಮಾಸ್ಕೋದ ಹೊರವಲಯದಲ್ಲಿರುವ ಕ್ರೋಕಸ್ ಸಿಟಿ ಹಾಲ್ ಕನ್ಸರ್ಟ್ ಸ್ಥಳದಲ್ಲಿ ಮೂವರು ಶಸ್ತ್ರಸಜ್ಜಿತ

ವ್ಯಕ್ತಿಗಳು ಗುಂಡು ಹಾರಿಸಿದ್ದಾರೆ ಎಂದು ರಷ್ಯಾದ ರಾಜ್ಯ ಮಾಧ್ಯಮ TASS ವರದಿ ಮಾಡಿದೆ. ಸ್ವ್ಯಾಟ್ ತಂಡವನ್ನು ಪ್ರದೇಶಕ್ಕೆ ಕರೆಸಲಾಗಿದ್ದು ೭೦ ಕ್ಕೂ ಹೆಚ್ಚು ಆಂಬ್ಯುಲೆನ್ಸ್ ಮತ್ತು ವೈದ್ಯರ ತಂಡಗಳು ಸಂತ್ರಸ್ತರಿಗೆ ಸಹಾಯ ಮಾಡಿದರು. ಸಂಕೀರ್ಣದ ಮೇಲ್ಛಾವಣಿಯ ಮೇಲೆ ದೊಡ್ಡ ಪ್ರಮಾಣದಲ್ಲಿ ಬೆಂಕಿ ಆವರಿಸಿಕೊಂಡಿದ್ದು ರಷ್ಯಾದ ವಿಶೇಷ ಪಡೆಗಳನ್ನು ಘಟನಾ ಸ್ಥಳದಲ್ಲಿ ನಿಯೋಜಿಸಲಾಗಿದೆ. TASS ಪ್ರಕಾರ, ಅಗ್ನಿಶಾಮಕ ದಳ ಸುಮಾರು ೧೦೦ ಜನರನ್ನು ಕಟ್ಟಡದಿಂದ ಸ್ಥಳಾಂತರಿಸಿದೆ. ಸಂಕಷ್ಟದಲ್ಲಿ ಸಿಲುಕಿಕೊಂಡಿರುವ ಜನರನ್ನು ರಕ್ಷಿಸಲು ಸಕಲ ಪ್ರಯತ್ನಗಳಮ್ಮ ಮಾಡಲಾಗುತ್ತಿದೆ ಎಂದು ಪ್ರಾದೇಶಿಕ ಗವರ್ನರ್ ಆಂಡ್ರೆ ವೊರೊಬಿಯೊವ್ ಹೇಳಿದರು. ಪರಿಸ್ಥಿತಿಯ ಬಗ್ಗೆ ಹೆಚ್ಚಿನ ವಿವರಗಳನ್ನು ಕಲೆ ಹಾಕಲು ಕಾರ್ಯನಿರ್ವಹಿಸಲಾಗುತ್ತಿದೆ ಎಂದು ಯುನೈಟೆಡ್ ಸ್ಟೇಟ್ಸ್ ಹೇಳಿದೆ ಮತ್ತು ಉಕ್ರೇನ್ ದಾಳಿಯ ಕುರಿತು ನಿರಾಕರಿಸಿದೆ.

******

ಸ್ವಿಟ್ಜರ್ಲೆಂಡ್‌ನ ಬಾಸೆಲ್‌ನಲ್ಲಿ ನಡೆಯುತ್ತಿರುವ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನಲ್ಲಿ ಭಾರತದ ತಾರಾ ಆಟಗಾರ ಷಟ್ಲರ್ ಕಿಡಂಬಿ ಶ್ರೀಕಾಂತ್ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಕಿಡಂಬಿ ಶ್ರೀಕಾಂತ್ ಕೇವಲ ೩೫ ನಿಮಿಷಗಳಲ್ಲಿ ೨೧-೧೦, ೨೧-೧೪ ರಿಂದ ಲೀ ಚಿಯಾ ಹಾವೊ ಅವರನ್ನು ಸೋಲಿಸಿದರು. ಶ್ರೀಕಾಂತ್ ಇಂದು ಲಿನ್ ಚುನ್-ಯಿ ವಿರುದ್ಧ ಫೈನಲ್‌ನಲ್ಲಿ ಸೆಣಸಲಿದ್ದಾರೆ. ಇತರ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ, ಪ್ರಿಯಾಂಶು ರಾಜಾವತ್ - ಟಿಯೆನ್ ಚೆನ್ ಚೌ ವಿರುದ್ಧ ೧೫-೨೧, ೧೯-೨೧ ರಿಂದ ಸೋತರೆ, ೨೩-೨೧, ೧೭-೨೧, ೧೫-೨೧ ರಲ್ಲಿ ಕಿರಣ್ ಜಾರ್ಜ್ ಡೇನ್ಮಾರ್ಕ್‌ನ ರಾಸ್ಮಸ್ ಗೆಮ್ಕೆ ವಿರುದ್ಧ ಸೋತರು.

******

ನಿನ್ನೆ ರಾತ್ರಿ ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್‌ನ ೧೭ನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ೬ ವಿಕೆಟ್‌ಗಳಿಂದ ಸೋಲಿಸಿದೆ. ಮೊದಲು ಬ್ಯಾಟಿಂಗ್ ಆಯ್ದುಕೊಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ,

೨೦ ಓವರ್‌ಗಳಲ್ಲಿ ೬ ವಿಕೆಟ್‌ಗಳಿಗೆ ೧೭೩ ರನ್‌ಗಳನ್ನು ಕಲೆಹಾಕಿತ್ತು. ಚೆನ್ನೈ ಪರ ಆಟಗಾರ ರಚಿನ್ ರವೀಂದ್ರ ೧೫ ಬಾಲ್‌ಗಳಿಗೆ ೩೭ ರನ್‌ಗಳಿಸಿದರೆ, ಬೆಂಗಳೂರು ಪರ ಅನೂಜ್ ರಾವತ್ ೨೫ ಎಸೆತಗಳಲ್ಲಿ ೪೮ ರನ್ ಗಳಿಸಿದರು. ಚೆನ್ನೈ ಸೂಪರ್ ಕಿಂಗ್ಸ್‌ನ ಮುಸ್ತಾಫಿಜೂರ್ ರೆಹಮಾನ್ ೨೯ ರನ್‌ಗಳಿಗೆ ೪ ವಿಕೆಟ್ ಪಡೆದರು. ಮುಸ್ತಾಫಿಜೂರ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಇಂದು ಮೊಹಾಲಿಯಲ್ಲಿ ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಮಧ್ಯಾಹ್ನ ೩.೩೦ಕ್ಕೆ ಆರಂಭವಾಗಲಿದೆ. ಅದೇ ರೀತಿ ಕೋಲ್ಕತ್ತಾದಲ್ಲಿ ಸಂಜೆ ೭.೩೦ಕ್ಕೆ ಆರಂಭವಾಗುವ ಪಂದ್ಯದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ಮತ್ತು ಸನ್ ರೈಸರ್ಸ್ ಹೈದರಾಬಾದ್ ತಂಡಗಳು ಸೆಣಸಲಿವೆ.

***END***